# ಪರಿಸರ ಸಾಹಿತ್ಯ ಮತ್ತು ಹಸಿರು ಚಿಂತನೆ: ಪೂರ್ಣಚಂದ್ರ ತೇಜಸ್ವಿಯವರ ಪರಿಸರ ಜಾಗೃತಿ ಚಿಂತನೆ

**ಜಿ.ಬಿ. ಮಹೇಶ್ವರಿ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರಂ, ಬೆಂಗಳೂರು.

**DOI: https://doi.org/10.5281/zenodo.18770508**

## ABSTRACT:

ಕನ್ನಡದ ಶ್ರೇಷ್ಠ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಬದುಕನ್ನೇ ಪರಿಸರದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡವರು. ಕೇವಲ ಭಾವನಾತ್ಮಕವಾಗಿರದೆ, ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಕೃತಿಯನ್ನು ಗ್ರಹಿಸಿದ ಅವರ ವಿಶಿಷ್ಟ ನಿಲುವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸಹ್ಯಾದ್ರಿ ಪರ್ವತ ಶ್ರೇಣಿಗಳ ಮಹತ್ವ, ಮರಗಳ ನಾಶದಿಂದಾಗುವ ಸೂಕ್ಷ್ಮ ಜೀವಿಗಳ ಸಂಕಷ್ಟ ಹಾಗೂ ಅವೈಜ್ಞಾನಿಕ ಅಭಿವೃದ್ಧಿ ಮಾದರಿಗಳ ಕುರಿತು ತೇಜಸ್ವಿ ಎತ್ತಿದ ಧ್ವನಿ ಇಂದಿಗೂ ಪ್ರಸ್ತುತ. ಮೈಸೂರಿನಿಂದ ಮೂಡಿಗೆರೆಗೆ ಸ್ಥಳಾಂತರಗೊಂಡು ಕೃಷಿ ಮತ್ತು ಛಾಯಾಗ್ರಹಣದ ಮೂಲಕ ಪ್ರಕೃತಿಯೊಂದಿಗೆ ಒಂದಾದ ಅವರ ಜೀವನಶೈಲಿ, ಟ್ರೆಕ್ಕಿಂಗ್ ಮತ್ತು ಮೀನುಗಾರಿಕೆಯ ಹಿಂದಿನ ನೈತಿಕತೆಯನ್ನು ಪ್ರಶ್ನಿಸುವ ಪರಿ ಇಲ್ಲಿ ವ್ಯಕ್ತವಾಗಿದೆ. ಮಾನವನ ಅಸ್ತಿತ್ವಕ್ಕೆ ಪ್ರಕೃತಿಯ ಅನಿವಾರ್ಯತೆಯನ್ನು ಸಾರುವ ಅವರ 'ಹಸಿರು ಚಿಂತನೆ' ಮತ್ತು ಕೃತಿಗಳು ಯುವ ಪೀಳಿಗೆಗೆ ಪರಿಸರ ಜಾಗೃತಿಯ ದಾರಿದೀಪವಾಗಿವೆ.

## KEYWORDS:

ಪರಿಸರ ಸಾಹಿತ್ಯ, ಹಸಿರು ಚಿಂತನೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪರಿಸರ ಸಂರಕ್ಷಣೆ, ಸಹ್ಯಾದ್ರಿ ಪರ್ವತ ಶ್ರೇಣಿ.

**ಪೀಠಿಕೆ:**

"ಮಾನವನಿಗೆ ಪ್ರಕೃತಿಯ ಅಗತ್ಯವಿದೆಯೇ ಹೊರತು ಪ್ರಕೃತಿಗೆ ಮಾನವನ ಅಗತ್ಯವಿಲ್ಲ" – ಪೂಚಂತೆ.

ಪರಿಸರ ಸಾಹಿತ್ಯ ಮತ್ತು ಹಸಿರು ಚಿಂತನೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತಿಗಳು ಪರಿಸರದ ಹಿನ್ನೆಲೆಯಲ್ಲಿ ವಿಶೇಷವಾದ ಕೃತಿಗಳನ್ನು ರಚಿಸಿರುವುದಕ್ಕೆ ಅನೇಕ ನಿದರ್ಶನಗಳಿವೆ. ಪೂರ್ಣಚಂದ್ರ ತೇಜಸ್ವಿ, ನಾಗೇಶ್ ಹೆಗಡೆ, ಬಿ.ಸಿ. ರಾಮಚಂದ್ರಶರ್ಮ ಮೊದಲಾದವರು ಪರಿಸರದ ಬರಹಗಳನ್ನು ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ ಬರಹಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

**ಉದ್ದೇಶ:**

ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧ ಬರಹಗಾರರಾದಂತಹ ಪೂರ್ಣಚಂದ್ರ ತೇಜಸ್ವಿಯವರನ್ನು 'ಪರಿಸರದ ಕವಿ' ಎಂದೇ ಕರೆಯಲಾಗುತ್ತದೆ. ಕಾರಣ, ಭಾವನಾತ್ಮಕವಾದ ಆಲೋಚನೆಗಳ ಜೊತೆಗೆ ಪರಿಸರವಾದಿ ಚಿಂತನೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಬಹಳ ಕರಾರುವಾಕ್ಕಾಗಿ ಬರೆದವರು ಪೂರ್ಣಚಂದ್ರ ತೇಜಸ್ವಿಯವರು. ಈ ಅಧ್ಯಯನದಲ್ಲಿ ತೇಜಸ್ವಿಯವರು 'ಪರಿಸರದ ಕಥೆ'ಗಳಲ್ಲಿ ಹಸಿರು ಚಿಂತನೆಯನ್ನು ಮಾಡುವ ಮೂಲಕ ಪರಿಸರ ಲೋಕಕ್ಕೆ, ಪರಿಸರವನ್ನು ಕುರಿತು ಸಾರ್ವಕಾಲಿಕ ಸತ್ಯಗಳನ್ನು ನೀಡಿರುವುದರ ಕುರಿತು ಗಮನಹರಿಸಲಾಗುತ್ತದೆ.

**ವಿಶ್ಲೇಷಣೆ:**

"ಪರಿಸರ ಸಾಹಿತ್ಯ" ಎನ್ನುವುದು ಪರಿಸರವನ್ನೇ ಕೇಂದ್ರವಾಗಿರಿಸಿಕೊಂಡು ಪ್ರಕೃತಿಯೇ ಬರಹದ ಮೂಲ ವಸ್ತುವಾಗಿ ಅಭಿವ್ಯಕ್ತವಾಗಿರುವುದನ್ನು ಪ್ರತಿನಿಧಿಸುತ್ತದೆ. "ಹಸಿರು ಚಿಂತನೆ" ಎನ್ನುವುದು ಪ್ರಕೃತಿಯ ಸಂರಕ್ಷಣೆ, ಭವಿಷ್ಯದ ಪೀಳಿಗೆಗೆ ಅದರ ಉಳಿವು, ಮಾಲಿನ್ಯ ನಿಯಂತ್ರಣ, ಸಂಪನ್ಮೂಲಗಳ ಮಿತ ಬಳಕೆ ಇವೇ ಮೊದಲಾದವುಗಳನ್ನು ಕುರಿತು ಮಾಡುವ ಆಲೋಚನೆಯಾಗಿದೆ. ಪರಿಸರ ಸ್ನೇಹಿ ಚಿಂತನೆಯನ್ನು ಒಳಗೊಂಡಿರುವ ಬರಹವೆಲ್ಲವೂ ಪರಿಸರ ಸಾಹಿತ್ಯ ಎನಿಸಿಕೊಳ್ಳುತ್ತದೆ. ಯಾರು ಪರಿಸರವನ್ನು ಕುರಿತು ಬರೆಯುತ್ತಾರೋ, ಅವರು ಸಹಜವಾಗಿಯೇ ಹಸಿರು ಚಿಂತನಾ ಪ್ರಜ್ಞೆಯನ್ನು ಹೊಂದಿರುತ್ತಾರೆ. ಹಸಿರು ಚಿಂತನೆ ಎನ್ನುವುದು ಪರಿಸರ ವಿಜ್ಞಾನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ವೃತ್ತಿ–ಪ್ರವೃತ್ತಿಗಳ ಆಚೆಗೂ ಪ್ರತಿ ವ್ಯಕ್ತಿಯಲ್ಲೂ ಇರಲೇಬೇಕಾದ ಮೂಲಭೂತ ಚಿಂತನೆಯಾಗಿದೆ. ಪ್ರವೃತ್ತಿಯಲ್ಲಿ ಬರಹಗಾರರಾದಂತಹ ಅನೇಕ ಚಿಂತಕರು ಕಥೆ, ಕಾದಂಬರಿಗಳಾಚೆಗೂ ಪ್ರಕೃತಿಯ ಬಗೆಗೆ ಅನೇಕ ಕಾಳಜಿಪರ ಚಿಂತನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ಪೂರ್ಣಚಂದ್ರ ತೇಜಸ್ವಿ ಅವರನ್ನು 'ಪರಿಸರವಾದಿ', 'ಪರಿಸರದ ಕವಿ' ಎಂದು ಕರೆಯಲಾಗುತ್ತದೆ. ಇವರು ಮೈಸೂರು ನಗರವನ್ನು ಬಿಟ್ಟು ಪರಿಸರದ ಜೊತೆ

ಒಡನಾಟವನ್ನು ಬೆಳೆಸುವ ಸಲುವಾಗಿ ಮಲೆನಾಡಿಗೆ ಹಿಂತಿರುಗಿದ ಸಾಹಿತಿ. ಒಬ್ಬ ಪ್ರಾಯೋಗಿಕ ಕೃಷಿಕ, ಅತ್ಯುತ್ತಮ ಪ್ರಕೃತಿ ಛಾಯಾಗ್ರಾಹಕ, ಪಕ್ಷಿಪ್ರೇಮಿ, ಪ್ರಕೃತಿಯನ್ನು ಸೂಕ್ಷ್ಮ ಸಂವೇದನೆಯಿಂದ ಅಧ್ಯಯನ ಮಾಡಿದ ಒಬ್ಬ ಅಪ್ಪಟ ಪರಿಸರವಾದಿ. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರಿಗೆ ಪ್ರಕೃತಿಯ ವಿಚಾರ ಅಧ್ಯಯನವನ್ನು ಕುರಿತು ವಿಶೇಷವಾದ ಸ್ಥಾನಮಾನಗಳಿವೆ. ಇವರ ಪ್ರಮುಖ ಕೃತಿಗಳು: ''ಅಬಚೂರಿನ ಪೋಸ್ಟಾಫೀಸು'', ''ಚಿದಂಬರ ರಹಸ್ಯ'', ''ಜುಗಾರಿ ಕ್ರಾಸ್'', ''ಪರಿಸರದ ಕಥೆಗಳು'', ''ಕನ್ನಡ ನಾಡಿನ ಹಕ್ಕಿಗಳು'', ''ಪ್ರಕೃತಿ ಮತ್ತು ಪರಿಸರ'' ಇವೇ ಮೊದಲಾದವುಗಳು.

ವರ್ತಮಾನದ ಪರಿಸರ ಸಮಸ್ಯೆಗಳನ್ನು ಚರ್ಚಿಸುವುದರ ಜೊತೆಗೆ ಅವುಗಳಿಗೆ ಪರಿಹಾರೋಪಾಯವಾಗಿಯೂ ತೇಜಸ್ವಿಯವರು ತಮ್ಮ ಬರಹಗಳ ಮೂಲಕ ಉಲ್ಲೇಖಿಸುತ್ತಾರೆ. ದಕ್ಷಿಣ ಭಾರತಕ್ಕೆ ಸಹ್ಯಾದ್ರಿ ಪರ್ವತಗಳು ಪರಿಸರ ಸಮತೋಲನವನ್ನು ಕಾಪಾಡುವುದರಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ ಎನ್ನುವುದು ತೇಜಸ್ವಿಯವರ ವಾದ. ಅವರು ಭಾರತ ದೇಶಕ್ಕೆ ಹಿಮಾಲಯ ಪರ್ವತಗಳು ಹೇಗೆ ಪರಿಸರ ಸಮತೋಲನವನ್ನು ಕಾಪಾಡುವುದರಲ್ಲಿ ಪಾತ್ರ ವಹಿಸುತ್ತವೋ, ಅಷ್ಟೇ ಪಾತ್ರವನ್ನು ದಕ್ಷಿಣ ಭಾರತದ ಸಮತೋಲನಕ್ಕಾಗಿ ಸಹ್ಯಾದ್ರಿ ಪರ್ವತಗಳು ವಹಿಸುತ್ತವೆ ಎನ್ನುವುದನ್ನು ಪ್ರತಿಪಾದಿಸುತ್ತಾರೆ.

ತೇಜಸ್ವಿಯವರ ಯಾವುದೇ ಬರಹವು ಪರಿಸರವಿಲ್ಲದೆ ಪ್ರಾರಂಭವಾಗುವುದಿಲ್ಲ ಅಥವಾ ಪರಿಪೂರ್ಣವೂ ಅಲ್ಲ. ಅವರ ಬದುಕು ಆಲೋಚನೆಗಳು ಸದಾ ಪ್ರಕೃತಿಯ ಸುತ್ತಲೇ ಸುತ್ತುತ್ತಿರುತ್ತದೆ. ಅವರಿಗೆ ಜನರ ಮಧ್ಯೆ ವಾಸ ಮಾಡುವುದಕ್ಕಿಂತಲೂ ಪ್ರಕೃತಿಯ ಮಧ್ಯೆ ವಾಸಿಸುವುದು ಬಹಳ ಅರ್ಥಪೂರ್ಣವಾಗಿತ್ತು. ಹಾಗಾಗಿಯೇ ಮೈಸೂರಿನ ನಗರವನ್ನು ಬಿಟ್ಟು ಮೂಡುಗೆರೆಗೆ ತಮ್ಮ ಇಡೀ ಬದುಕನ್ನು ಸ್ಥಿತ್ಯಂತರಗೊಳಿಸಿಕೊಂಡದ್ದು ಅವರ ಬದುಕಿನ ಬಹಳ ಪ್ರಮುಖ ಘಟ್ಟವಾಗಿದೆ.

ಮೈಸೂರಿನಿಂದ ಮೂಡುಗೆರೆಗೆ ಅವರ ಪ್ರಯಾಣ, ಜನರಿಂದ ದೂರವಾಗಿ ಪರಿಸರಕ್ಕೆ ಹತ್ತಿರವಾದದ್ದು, ಸಮಗ್ರತೆಯಿಂದ ಸೂಕ್ಷ್ಮತೆಯೆಡೆಗೆ ಹಾಗೆಯೇ ಸೂಕ್ಷ್ಮತೆಯಿಂದ ಸಮಗ್ರತೆಯೆಡೆಗೆ ಆಲೋಚಿಸುವ ಅವರ ಬದುಕಿನ ಪರಿ ಇಡೀ ಪ್ರಕೃತಿಯ ಬಗೆಗೆ ಅವರ ಆಲೋಚನೆಗಳು ಕೇಂದ್ರೀಕೃತವಾಗಿದ್ದುದ್ದಕ್ಕೆ ಸಾಕ್ಷಿಯಾಗಿವೆ.

ತೇಜಸ್ವಿಯವರು ಮೀನು ಹಿಡಿಯುವಿಕೆಯನ್ನು ವಿರೋಧಿಸುತ್ತಾರೆ. ಏಕೆಂದರೆ ಮೀನನ್ನು ಹಿಡಿಯುವಲ್ಲಿ ನದಿಗಳಿಗೆ ಎಸೆಯುವ ರಾಸಾಯನಿಕಗಳಿಂದ ಮೀನುಗಳಿಗೆ ಅಪಾಯಕಾರಿಯಾಗುತ್ತದೆ. ಇದರಿಂದ ಮೀನುಗಳ ಸಂತತಿಗೆ ಮಾರಕವಾಗುತ್ತದೆ ಎನ್ನುವುದನ್ನು ತೇಜಸ್ವಿಯವರು ತಿಳಿಸುತ್ತಾರೆ. ಹಾಗಾಗಿ ತೇಜಸ್ವಿಯವರು ಸ್ವತಃ ಮೀನು ಹಿಡಿಯುವಿಕೆಯನ್ನು ವಿರೋಧಿಸುತ್ತಿದ್ದರು.

ಮರಗಳನ್ನು ಹೊಸದಾಗಿ ನೆಡುವಿಕೆಯನ್ನು ತೇಜಸ್ವಿಯವರು ಉತ್ತೇಜಿಸುತ್ತಾರೆ.

ಒಂದು ಮರವನ್ನು ಕಡಿದರೆ ಎಷ್ಟು ನಷ್ಟವಾಗುತ್ತದೆ ಎನ್ನುವುದನ್ನು ತೇಜಸ್ವಿಯವರು ವಿವರಿಸುತ್ತಾರೆ. ಉದಾಹರಣೆಗೆ, ಆ ಮರವನ್ನು ಅವಲಂಬಿಸಿಕೊಂಡು ವಿಕಾಸವಾಗುತ್ತಾ ಇರುವ ಹಲವು ಆರ್ಕಿಡ್‌ಗಳು, ಪರಾವಲಂಬಿ ಫರ್ನ್‌ಗಳು, ಅವುಗಳ ಬೇರಿನ ತೊಡಕುಗಳಲ್ಲೇ ಗೂಡುಕಟ್ಟಿಕೊಂಡಿರುವ ಇರುವೆಗಳು, ಇವುಗಳ ಎಲೆಗಳ ಚೂರು, ಮಣ್ಣು ಮುಂತಾದವುಗಳಿಂದ ಲವಣಗಳನ್ನು ಆಹಾರವನ್ನು ಸರಬರಾಜು ಮಾಡುತ್ತಿರುತ್ತವೆ. ಅದೆಷ್ಟೋ ಹಕ್ಕಿಗಳಿಗೆ ತಾಣವಾಗಿರುತ್ತವೆ. ಹಾಗಾಗಿ ಒಂದು ಮರವನ್ನು ಕಡಿಯುವುದು ಬಹಳಷ್ಟು ನಷ್ಟಕ್ಕೆ ಕಾರಣವಾಗುತ್ತದೆ. ನಮಗೆ ನೇರವಾಗಿ ಮರ ಕಡಿಯುವುದು ಕಾಣುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಅದರ ಆಚೆಗಿನ ಅದೆಷ್ಟೋ ಅನಾನುಕೂಲಗಳು ಕೂಡ ಕಾಣಿಸುತ್ತವೆ.

ಹಲವಾರು ಕೃಷಿಕರಿಗೆ ತೇಜಸ್ವಿಯವರು ಮಾದರಿಯಾಗುತ್ತಾರೆ. ಏಕೆಂದರೆ ಯುವ ಕೃಷಿಕರಿಗೆ, ಯುವ ರೈತರಿಗೆ ತೇಜಸ್ವಿಯವರು ಬಹುದೊಡ್ಡ ಉದಾಹರಣೆಯಾಗುತ್ತಾರೆ. ಆಧುನಿಕ ಮಾದರಿಯಲ್ಲಿ ಕೃಷಿ ಮಾಡುವುದು ಹಾಗೂ ವೈಜ್ಞಾನಿಕ ರೀತಿಯಲ್ಲಿ ಬೇಸಾಯವನ್ನು ಮಾಡುವುದನ್ನು ತೇಜಸ್ವಿಯವರು ತಮ್ಮ ಪ್ರಯೋಗಾತ್ಮಕತೆಯಿಂದ ಸಾಬೀತು ಮಾಡುತ್ತಾರೆ.

ಚಿಕ್ಕಮಗಳೂರಿನಲ್ಲಿ ಕೃಷಿಗಾಗಿ ಹಲವು ರೈತರು ಕಾಡಿನ ಭೂಮಿಯನ್ನು ಒತ್ತುವರಿಸುತ್ತಾರೆ. ಆದರೆ ಹಾಗೆ ಮಾಡಬಾರದು ಎನ್ನುವುದು ತೇಜಸ್ವಿಯವರ ನೈತಿಕವಾದವಾಗಿದೆ. ಟ್ರೆಕ್ಕಿಂಗ್ ಹೋಗುವಂತಹ ಜನರ ಮೂಲ ಉದ್ದೇಶವನ್ನು ತೇಜಸ್ವಿಯವರು ವಿಶ್ಲೇಷಿಸುತ್ತಾರೆ. ಟ್ರೆಕ್ಕಿಂಗ್ ಎನ್ನುವುದು ವಿನೋದಕ್ಕಾಗಿ, ಮನರಂಜನೆಗಾಗಿ ಜನರು ಕೈಗೊಳ್ಳುತ್ತಾರೆ. ಆದರೆ ಅಲ್ಲಿ ನಿಜವಾದ ಪರಿಸರಪ್ರೇಮ ಎನ್ನುವುದು ಇರುವುದಿಲ್ಲ. ತೇಜಸ್ವಿಯವರ ಪ್ರಕಾರ ಟ್ರೆಕ್ಕಿಂಗ್ ಎನ್ನುವುದು ಬರಿ ಮನರಂಜನೆಗಲ್ಲ, ಅದು ನಿಜವಾಗಿಯೂ ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳುವಿಕೆಯಾಗಬೇಕು.

ಹಾಗೆ ತೇಜಸ್ವಿಯವರು ಮತ್ತೊಂದು ಪ್ರಸಂಗವನ್ನು ಉಲ್ಲೇಖಿಸುತ್ತಾರೆ. ವಲಸೆ ಬರುವ ಮಂದಿ ತಾತ್ಕಾಲಿಕವಾಗಿ ಬಿಡಾರಗಳನ್ನು ಹಾಕುತ್ತಾರೆ. ಆದರೆ ಅಲ್ಲಿಯೇ ಶಾಶ್ವತವಾಗಿ ನೆಲೆ ಮಾಡಿಕೊಳ್ಳುತ್ತಾರೆ. ಆದರೆ ರಾಜಕಾರಣಿಗಳು ಓಟಿಗಾಗಿ ವಲಸೆ ಬಂದ ಜನರಿಗೆ ಪರ್ಯಾಯ ವಸತಿಗಳನ್ನು ಒದಗಿಸುವ ಬದಲು ಸುಮ್ಮನಾಗಿ ಬಿಡುತ್ತಾರೆ. ಒಂದಷ್ಟು ಕಾಡು ನಾಡಾಗಿ ಪರಿವರ್ತನೆ ಆಗುತ್ತದೆ. ಇದರ ಜೊತೆಯಲ್ಲಿ ಬಹಳಷ್ಟು ಅಕ್ರಮ ಮರಸಾಗಾಣಿಕೆಯಾಗುತ್ತದೆ. ವಿಶೇಷವಾಗಿ ಗಂಧದ ಮರದ ಅಕ್ರಮ ಸಾಗಾಣಿಕೆಯಾಗುತ್ತದೆ. ಇವೆಲ್ಲವೂ ಕೂಡ ಪರಿಸರದ ಸಂರಕ್ಷಣೆಯ ದೃಷ್ಟಿಯಲ್ಲಿ ನಿಲ್ಲಬೇಕು.

ಅರಣ್ಯವನ್ನು ಸಂರಕ್ಷಿಸುವಲ್ಲಿ ಅರಣ್ಯ ಕಾವಲುಗಾರರ ಪಾತ್ರ ವಿಶೇಷವಾಗಿರುತ್ತದೆ. ಆದರೆ ಅರಣ್ಯ ಕಾವಲುಗಾರರಿಗೆ ಬೇಕಾದ ಸವಲತ್ತುಗಳು ಇರುವುದಿಲ್ಲ. ಹಾಗಾಗಿ ವಿಶಾಲವಾದ ಅರಣ್ಯವನ್ನು ಕಾಯುವುದು ಅವರಿಗೆ

ಕಷ್ಟವಾಗಿರುತ್ತದೆ. ಇಂತಹ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳು ಗುರುತಿಸಿ ಅನುಕೂಲಕರವಾದಂತಹ ಸವಲತ್ತುಗಳನ್ನು, ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಅನೇಕ ಅಭಿವೃದ್ಧಿ ಯೋಜನೆಗಳು ಹೆಸರಿಗೆ ಮಾತ್ರ ಸೀಮಿತವಾಗಿರುತ್ತವೆ, ಆದರೆ ನಿಜವಾದ ಅಭಿವೃದ್ಧಿಯೇ ಆಗುತ್ತಿರುವುದಿಲ್ಲ. ಮತ್ತಷ್ಟು ಅಭಿವೃದ್ಧಿಯ ಯೋಜನೆಗಳಿಂದ ಪರಿಸರಕ್ಕೆ ಹಾನಿ ಉಂಟಾಗುತ್ತಿರುತ್ತದೆ. ಅಂತಹ ಯೋಜನೆಗಳನ್ನು ಕೈ ಬಿಡುವುದೇ ಉತ್ತಮ ಎನ್ನುವುದು ತೇಜಸ್ವಿಯವರ ಮತ್ತೊಂದು ವಾದವಾಗಿದೆ.

ಮಾನವನನ್ನು ಬಿಟ್ಟರೆ ಪ್ರಕೃತಿಯ ಎಲ್ಲ ಜೀವಿಗಳ ಮೇಲೂ ತೇಜಸ್ವಿಯವರಿಗೆ ವಿಶೇಷವಾದ ಅಕ್ಕರೆ ಮತ್ತು ಆಸಕ್ತಿ ಇತ್ತು. ಕಾಳಜಿಯ ಬಗ್ಗೆಯಂತೂ ಮಾತೇ ಇಲ್ಲ. ಅವರ ಬದುಕಿನ ಅನೇಕ ಪ್ರಮುಖ ಕ್ಷಣಗಳಲ್ಲಿ ಸಾಕ್ಷಿಯಾಗಿರುವ ಕಿವಿ (ನಾಯಿ), ಹಕ್ಕಿ–ಪಕ್ಷಿಗಳು, ಮಾನೀಟರ್ (ಉಡ), ಮೀನಿನ ವೀಕ್ಷಣೆ, ಚಿಟ್ಟೆಗಳು ಇದಕ್ಕೆ ಸಾಕ್ಷಿ.

ತೇಜಸ್ವಿಯವರ "ಪ್ರಕೃತಿ ಮತ್ತು ಪರಿಸರ" ಕೃತಿಯು ಪರಿಸರದ ಮೂಲಭೂತ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಪ್ರಯತ್ನ ಮಾಡುತ್ತದೆ. ತೇಜಸ್ವಿಯವರು ತಾವು ಪ್ರಯೋಗವನ್ನು ಮಾಡುವ ಮೂಲಕವೇ ಅಭಿಪ್ರಾಯ ನಿರ್ಧಾರಕ್ಕೆ ಬರುತ್ತಿದ್ದರು. ಸ್ಥಳೀಯ ಜ್ಞಾನ ಭಂಡಾರವಾದ ಕೃಷಿಕರು, ಶ್ರಮಿಕ ಜೀವಿಗಳು ಆಡುವ ಪ್ರತಿ ಮಾತುಗಳನ್ನು ಆಲಿಸುವ ಮೂಲಕ ಅವರ ಮಾತುಗಳಲ್ಲಿ ಇದ್ದಂತಹ ವೈಜ್ಞಾನಿಕ ಜ್ಞಾನ ಪರಂಪರೆ ಮತ್ತು ಪರಿಸರ ವಿಸ್ಮಯಗಳನ್ನು ಅರಿಯುತ್ತಿದ್ದರು.

### ಪರಾಮರ್ಶನ ಗ್ರಂಥಗಳು:

1. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1993), ಪರಿಸರದ ಕಥೆ, ಮೈಸೂರು: ಪುಸ್ತಕ ಪ್ರಕಾಶನ.
2. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (2003), ಹಕ್ಕಿ ಪುಕ್ಕ, ಮೈಸೂರು: ಪುಸ್ತಕ ಪ್ರಕಾಶನ.
3. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1996), ಹೆಜ್ಜೆ ಮೂಡಿದ ಹಾದಿ, ಮೈಸೂರು: ಪುಸ್ತಕ ಪ್ರಕಾಶನ.
4. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (1999), ವಿಸ್ಮಯ ವಿಶ್ವ–2, ಮೈಸೂರು: ಪುಸ್ತಕ ಪ್ರಕಾಶನ.